## ಕುಂಭಪರ್ವ

ಹಿಡಿಕೆಯಿಲ್ಲದ ದುಂಡನೆಯ ಮಡಕೆ ಅಥವಾ ಕಳಶಕ್ಕೆ 'ಕುಂಭ' ಎನ್ನುತ್ತಾರೆ. ಖಗೋಲದ ಹನ್ನೆರಡು ರಾಶಿಗಳಲ್ಲಿ 'ಕುಂಭ'ವೂ ಒಂದು. ಈ ರಾಶಿಯಲ್ಲಿ ಸೂರ್ಯ ಇರುವಾಗ ನಡೆಯುವ ಮೇಳ ಅಥವಾ ಪರ್ವವೇ 'ಕುಂಭಮೇಳ.' ಹನ್ನೆರಡು ವರ್ಷಗಳಿಗೆ ಒಮ್ಮೆ ಪ್ರಯಾಗ, ಹರಿದ್ವಾರ, ಉಜ್ಜಯಿನಿ, ನಾಸಿಕ್‌ಗಳಲ್ಲಿ ಪೂರ್ಣ ಕುಂಭಮೇಳ ಜರುಗುತ್ತದೆ. ಆರು ವರ್ಷಗಳಿಗೆ ಒಮ್ಮೆ ಪ್ರಯಾಗ ಮತ್ತು ಹರಿದ್ವಾರಗಳಲ್ಲಿ ಅರ್ಧ ಕುಂಭಮೇಳ ನಡೆಯುತ್ತದೆ. ೧೨ ಪೂರ್ಣ ಕುಂಭಮೇಳಗಳ ನಂತರ, ಅಂದರೆ, ೧೪೪ ವರ್ಷಗಳಿಗೆ ಒಮ್ಮೆ ಮಹಾಕುಂಭ ಮೇಳ ಬರುತ್ತದೆ. ಮಹಾಕುಂಭದ ಸ್ಥಾನವನ್ನು ಗುರು ಗ್ರಹವು ಯಾವ ರಾಶಿಯಲ್ಲಿ ಇದೆ ಎಂಬುದರ ಮೇಲೆ ನಿರ್ಧರಿಸುತ್ತಾರೆ.

## ಕುಂಭಮೇಳದ ಇತಿಹಾಸ

ಕುಂಭಮೇಳ ಎಷ್ಟು ಪುರಾತನವಾದುದು ಎಂದರೆ ಋಗ್ವೇದದಲ್ಲಿ ಕೂಡ ಇದರ ಪ್ರಸ್ತಾಪ ಇದೆ. ಹರಿತವಾದ ಕೊಡಲಿಯು ಸೌದೆಯನ್ನು ತುಂಡು ಮಾಡುವಂತೆ ಕುಂಭಮೇಳದ ಆಚರಣೆಯಿಂದ ಬರುವ ಪುಣ್ಯವು ಅನೇಕ ಕಾಲದಿಂದ ಒಟ್ಟಾಗಿರುವ ಪಾಪರಾಶಿಯನ್ನು ತೊಳೆದುಹಾಕುತ್ತದೆ ಎಂಬ ಅರ್ಥ ಬರುವ ಸೂಕ್ತವೊಂದು ಅಲ್ಲಿ ಇದೆ (೧೦.೮೯.೯). ಪ್ರಸಿದ್ಧ ಚೀನೀ ಯಾತ್ರಿಕ ಹ್ಯುಯಾನ್ ಜಾಂಗ್ ಕ್ರಿ.ಶ.೬೨೯–೬೪೫ರಲ್ಲಿ ರಾಜ ಹರ್ಷವರ್ಧನನ ಸಮಯದಲ್ಲಿ ಭಾರತಕ್ಕೆ ಬಂದಿದ್ದ. ಅವನ ಬರಹವೇ ಕುಂಭಮೇಳದ ಬಗೆಗಿನ ಅತ್ಯಂತ ಪ್ರಾಚೀನ ಐತಿಹಾಸಿಕ ಉಲ್ಲೇಖ ಎನ್ನಬಹುದು. ಅವನು ಹೀಗೆ ಬರೆಯುತ್ತಾನೆ: "ತಮ್ಮ ಪಾಪಗಳನ್ನು ಕಳೆದುಕೊಳ್ಳುವ ಸಲುವಾಗಿ ಪವಿತ್ರಸ್ನಾನವನ್ನು ಮಾಡಲು, ಹರಿದ್ವಾರದಲ್ಲಿ ಸೇರಿದ್ದ ಅತಿ ದೊಡ್ಡ ಜನಜಂಗುಳಿಯನ್ನು ನಾನು ನೋಡಿದೆ." ಜವಹರಲಾಲ ನೆಹರು ಅವರು 'ಡಿಸ್‌ಕವರಿ ಆಫ್ ಇಂಡಿಯಾ' ಎಂಬ ಗ್ರಂಥದಲ್ಲಿ, "ಈ ಬಗೆಯ ಮೇಳಗಳ ಆಚರಣೆ ಬಹಳ ಹಿಂದಿನಿಂದ ನಡೆದು ಬಂದಿದೆ, ಇವು ಎಂದು ಪ್ರಾರಂಭವಾದುವೋ ಯಾರಿಗೂ ತಿಳಿಯದು" ಎಂದು ಬರೆಯುತ್ತಾರೆ.

## ತೀರ್ಥಕ್ಷೇತ್ರ ಹರಿದ್ವಾರ

ಹರಿದ್ವಾರ ಗಂಗಾತೀರದಲ್ಲಿರುವ ಪುಣ್ಯಕ್ಷೇತ್ರ. ಇಲ್ಲಿ ಅಸಂಖ್ಯಾತ ಆಶ್ರಮಗಳು, ವೇದಾಂತಪೀಠಗಳು, ಮಠಗಳು, ಅಖಾಡಗಳು, ದೇವಸ್ಥಾನಗಳು ಹರಡಿಕೊಂಡಿವೆ. ಈ ನಗರದ ಮಧ್ಯಭಾಗದಲ್ಲಿ ಶಕ್ತಿಪೀಠಗಳಲ್ಲಿ ಒಂದಾದ ಮಾಯಾದೇವಿಯ ದೇವಸ್ಥಾನ ಇದೆ. ಪ್ರಾಚೀನ ಕಾಲದಲ್ಲಿ ಈ ಕ್ಷೇತ್ರವನ್ನು 'ಮಾಯಾಪುರಿ' ಎಂದೇ ಕರೆಯುತ್ತಿದ್ದರು. ಈಗ ಮಾಯಾದೇವಿಯ ದೇವಸ್ಥಾನದ ಸುತ್ತ ಅಖಾಡವಿದೆ. ಏಳು ಮೋಕ್ಷಪುರಿಗಳಲ್ಲಿ ಅಂದರೆ ಮೋಕ್ಷಕ್ಕೆ ಕಾರಣವಾಗುವ ಪುಣ್ಯಕ್ಷೇತ್ರಗಳಲ್ಲಿ ಹರಿದ್ವಾರವೂ ಒಂದು.

ಬ್ರಹ್ಮಕುಂಡ ಅಥವಾ **'ಹರೀ ಕೀ ಪೌರಿ'** ಯಲ್ಲಿನ (ವಿಷ್ಣುವಿನ ಹೆಜ್ಜೆ) ಗಂಗಾಸ್ನಾನವು ಅತಿ ಪವಿತ್ರವೆಂದು ಹಿಂದೂಗಳು ನಂಬುತ್ತಾರೆ. ಇಲ್ಲಿನ ಸ್ನಾನಘಟ್ಟವನ್ನು ವಿಕ್ರಮಾದಿತ್ಯ ಕಟ್ಟಿಸಿದ್ದು ಎಂಬ ನಂಬಿಕೆ ಕೂಡ ಇದೆ. ಗಂಗಾಮಾತೆ, ವಿಷ್ಣು ಮೊದಲಾದ ದೇವತೆಗಳ ದೇವಸ್ಥಾನಗಳೂ ಇಲ್ಲಿವೆ. ಬೆಟ್ಟದ ಮೇಲಿರುವ ಮಾನಸಾ ದೇವಿ, ಚಂಡಿ, ಬಿಲ್ವಕೇಶ್ವರದ ಶಿವ – ಇವು ಹರಿದ್ವಾರದಲ್ಲಿರುವ ಇತರ ಮುಖ್ಯ ದೇವಾಲಯಗಳು. ಸಪ್ತಋಷಿ ಆಶ್ರಮ ಮೊದಲಾದ ಅನೇಕ ಮಠಗಳು, ಆಶ್ರಮಗಳು ಇಲ್ಲಿವೆ.

ತಣ್ಣನೆಯ ನೀರನ್ನು ಹಿಮಾಲಯದ ಕಾರ್ಗಲ್ಲುಗಳಿಂದ ಹೊತ್ತುತರುವ ಗಂಗೆಯು ಅನೇಕ ಸಣ್ಣ ಕವಲುಗಳೊಡನೆ, ಹರಿದ್ವಾರದಲ್ಲಿ ಮೈದಾನಪ್ರದೇಶವನ್ನು ಪ್ರವೇಶಿಸುತ್ತಾಳೆ. ನದಿಯ ಮುಖ್ಯ ಕವಲು ಹರೀ ಕೀ ಪೌರಿಯ ಪಕ್ಕದಲ್ಲಿಯೇ ನಾಲ್ಕು ಕಿಲೋಮೀಟರ್‌ಗಳಷ್ಟು ದೂರ ಹರಿದು, ಇನ್ನೊಂದು ಶಾಖೆಯನ್ನು ಸೇರುತ್ತದೆ. ಅನಂತರ ನಾಲ್ಕು ನೂರು ಕಿಲೋಮೀಟರ್ ಉದ್ದದ ಗಂಗಾ ಕಾಲುವೆಯ ಮೂಲಕ ಹರಿದು ಕಾನ್‌ಪುರದಲ್ಲಿ ಮುಖ್ಯ ನದಿಯನ್ನು ಸೇರುತ್ತದೆ. ಈ ಕಾಲುವೆಯನ್ನು ಬ್ರಿಟಿಷರು ಸುಮಾರು ೧೫೦ ವರ್ಷಗಳ ಹಿಂದೆ ನಿರ್ಮಾಣ ಮಾಡಿದರು. ಇದೀಗ ಇದು ನೂರಾರು ಗ್ರಾಮ ನಗರಗಳಿಗೆ ಜೀವದಾಯಿನಿಯಾಗಿ ಪರಿಣಮಿಸಿದೆ.

(ಮುಂದುವರಿಯುತ್ತದೆ)




# ಆಚಾರ್ಯತ್ರಯರು

ಹೆಚ್.ವಿ.ಸರೋಜ

## ಶ್ರೀಶಂಕರಾಚಾರ್ಯರು

### ಜನನ ಮತ್ತು ಬಾಲ್ಯ

ಕಾಲಡಿ ಎಂಬುದು ಕೇರಳದಲ್ಲಿನ ಒಂದು ಸುಂದರ ಗ್ರಾಮ. ಅಲ್ಲಿ ತಿಳಿನೀರಿನ ಪೂರ್ಣಾನದಿ ಜುಳಜುಳು ಎಂದು ಹರಿಯುತ್ತದೆ. ಇಂತಹ ಸುಂದರ ಗ್ರಾಮದಲ್ಲಿ ದೈವಭಕ್ತ ದಂಪತಿಗಳಾದ ಶಿವಗುರು, ಆರ್ಯಾಂಬೆ ಎಂಬ ನಂಬೂದರಿ ಬ್ರಾಹ್ಮಣ ಕುಟುಂಬವು ವಾಸವಾಗಿತ್ತು. ಶ್ರೀಮಂತರೂ, ಸರಳರೂ ಮತ್ತು ವಿದ್ಯಾಸಂಪನ್ನರೂ ಆದ ಆ ದಂಪತಿಗಳಿಗೆ ಮಕ್ಕಳಾಗಲಿಲ್ಲವಲ್ಲ ಎಂಬ ಕೊರಗು. ಎಷ್ಟೆಲ್ಲಾ ವ್ರತ, ಪೂಜೆ, ಹರಕೆ ಮಾಡಿದರೂ ಏನೂ ಫಲ ಸಿಗಲಿಲ್ಲ ಎಂದು ನಿರಾಶರಾಗಿದ್ದಾಗ, ಒಬ್ಬ ಇಷ್ಟಮಿತ್ರರ ಸಲಹೆಯಂತೆ, ತ್ರಿಚೂರಿನಲ್ಲಿರುವ ವೃಷಾಚಲೇಶ್ವರನ ಸೇವೆಯನ್ನು ಹಲವು ದಿನಗಳ ಕಾಲ ಮಾಡಿದರು. ಅವರು ಶ್ರದ್ಧಾಭಕ್ತಿಗಳಿಂದ ಮಾಡಿದ ಸೇವೆಗೆ ಸಂತೃಪ್ತನಾದ ಶಿವ ಒಂದು ದಿನ ಅವರ ಕನಸಿನಲ್ಲಿ ಕಾಣಿಸಿಕೊಂಡು, "ನಿಮ್ಮ ನಿಷ್ಠೆ ಭಕ್ತಿಗಳಿಗೆ ಮೆಚ್ಚಿದ್ದೇನೆ. ನಿಮ್ಮ ಆಸೆಯನ್ನು ನೆರವೇರಿಸುತ್ತೇನೆ. ಆದರೆ ನಿಮಗೆ ಒಂದು ವಿಷಯವನ್ನು ಹೇಳುತ್ತೇನೆ. ಸರಿಯಾಗಿ ಆಲೋಚಿಸಿ ಉತ್ತರಿಸಿ. ನಿಮಗೆ ಲೋಕಗುರುವೆನಿಸುವ ಕೆಲವೇ ವರ್ಷ ಬದುಕುವ ಒಬ್ಬ ಪುತ್ರನು ಬೇಕೆ, ಅಥವಾ ಬಹಳ ವರ್ಷ ಬದುಕುವ ಅನೇಕ ದಡ್ಡ ಮಕ್ಕಳು ಬೇಕೆ?" ಎಂದು ಕೇಳಿದ.



ಒಂದು ಕ್ಷಣ ಆ ದಂಪತಿಗಳಿಗೆ ಏನು ಹೇಳಬೇಕೆಂದೇ ಹೊಳೆಯಲಿಲ್ಲ. ಕೊನೆಗೆ ಯೋಚಿಸಿ, "ಸ್ವಾಮಿ, ನಿನ್ನ ಇಚ್ಛೆ ಹೇಗಿದೆಯೋ ಹಾಗೆ ನೀನೇ ತೀರ್ಮಾನಿಸಿ ನಮಗೆ ಮಗುವನ್ನು ಕರುಣಿಸು" ಎಂದು ತೀರ್ಪನ್ನು ಭಗವಂತನಿಗೇ ಬಿಟ್ಟರು. ಇದರಿಂದ ಪ್ರಸನ್ನನಾದ ಶಿವನು, "ಶಿವಾಂಶಸಂಭೂತನಾಗಿ ನಿಮ್ಮ ಕುಮಾರ ಲೋಕಗುರುವಾಗುತ್ತಾನೆ" ಎಂದು ಹೇಳಿ ಅಂತರ್ಧಾನನಾದನು.

ಹೀಗೆ ಈಶ್ವರನ ಪೂರ್ಣಾನುಗ್ರಹದಿಂದ ಆರ್ಯಾಂಬೆಯ ಗರ್ಭದಲ್ಲಿ ಪುತ್ರರತ್ನ ಜನಿಸಿತು. ಅವನಿಗೆ ಶಂಕರನೆಂದು ನಾಮಕರಣ ಮಾಡಿದರು. ಅಂದು ವೈಶಾಖ ಶುಕ್ಲ ಪಂಚಮಿ. ಅಂದಿನ ದಿನವನ್ನು ಪ್ರತಿವರ್ಷವೂ ನಾವು 'ಶಂಕರ ಜಯಂತಿ' ಎಂದು ಆಚರಿಸುತ್ತೇವೆ.

ಬಾಲಕ ಶಂಕರರು ದೈವಾಂಶಸಂಭೂತರಾದ್ದರಿಂದ ಬಾಲ್ಯದಿಂದಲೂ ಅಸಮಾನರಾಗಿಯೇ ಬೆಳೆದರು. ಎಂಟನೆಯ ವಯಸ್ಸಿಗೆ, ನಾಲ್ಕು ವೇದಗಳು, ಹನ್ನೆರಡು ಶಾಸ್ತ್ರಗಳು ಅವರಿಗೆ ಮನದಟ್ಟಾಗಿತ್ತು. ಆ ವಯಸ್ಸಿಗೇ ಅವರು ಪ್ರಾಕೃತ, ಮಾಗಧಿ, ಸಂಸ್ಕೃತ ಭಾಷೆಗಳಲ್ಲಿ ಪಾರಂಗತರಾಗಿದ್ದರು.

ಶಂಕರರಿಗೆ ಐದು ವರ್ಷಕ್ಕೆ ಉಪನಯನವಾಗಿತ್ತು. ಆ ಹೊತ್ತಿಗೆ ತಂದೆ ಶಿವಗುರು ಕಾಲವಶರಾಗಿದ್ದರು. ತಾಯಿಯದೇ ಸಂಪೂರ್ಣ ಜವಾಬ್ದಾರಿ. ಗುರುಕುಲಕ್ಕೆ ಹೋದ ಮೇಲೆ, ಗುರುಗಳ ಮಾರ್ಗದರ್ಶನದಲ್ಲಿ ಎಲ್ಲಾ ಶಾಸ್ತ್ರಗಳನ್ನು ಶಂಕರರು ಅಧ್ಯಯನ ಮಾಡಿದರು.

ಗುರುಕುಲದಲ್ಲಿ ಎಲ್ಲಾ ವಟುಗಳೂ ಭಿಕ್ಷಾಟನೆಗೆ ಹೋಗಬೇಕೆಂಬ ನಿಯಮವಿತ್ತು. ಬಾಲಬ್ರಹ್ಮಚಾರಿ ಶಂಕರರು ಒಂದು ಗುಡಿಸಿಲಿನ ಮುಂದೆ ನಿಂತು, 'ಭವತಿ ಭಿಕ್ಷಾಂ ದೇಹಿ' ಎಂದು ಕೂಗಿದರು. ಅನೇಕ ಸಲ ಕೂಗಿದ ಮೇಲೆ ಒಬ್ಬ ಸ್ತ್ರೀ ಹೊರಕ್ಕೆ ಬಂದರು. ಅವರ ಮುಖ ಬಾಡಿತ್ತು. ಕಣ್ಣಿನಲ್ಲಿ ನೀರೂರಿತ್ತು. ಶಂಕರರಿಗೆ ಅವರ ಮುಖ ಕಂಡೊಡನೆ

**ಆಚಾರ್ಯತ್ರಯರಾದ ಶ್ರೀಶಂಕರ, ಶ್ರೀರಾಮಾನುಜ ಮತ್ತು ಶ್ರೀಮಧ್ವರ ಜೀವನವೃತ್ತಾಂತವು ಎಲ್ಲ ಬಗೆಯ ಜನರಿಗೂ ಬೋಧಪ್ರದವಾದುವು. ಅದನ್ನು ಧಾರಾವಾಹಿಯ ರೂಪದಲ್ಲಿ ಪ್ರಸ್ತುತ ಪಡಿಸುತ್ತಿದ್ದೇವೆ. ಇದನ್ನು ಸರಳವಾಗಿ ನಿರೂಪಿಸಿರುವ ಲೇಖಕಿ ಬೆಂಗಳೂರು ರಾಮಕೃಷ್ಣ ಮಠದ ಭಕ್ತರು. ಇವರ ಹಲವು ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.**

ವಿಷಯ ಅರ್ಥವಾಗಿ, "ಅಮ್ಮ, ನಿಮ್ಮಲ್ಲಿ ಏನಿದೆಯೋ ಅದನ್ನೇ ನನಗೆ ನೀಡಿ" ಎಂದು ಹೇಳಿದರು. ಆಕೆ, "ಮಗು, ಮನೆಯಲ್ಲಿ ನಿನಗೆ ಕೊಡುವುದಕ್ಕೆ ಏನೂ ಇಲ್ಲ. ನಾನೇನು ಕೊಡಲಿ" ಎಂದು ಹೇಳಿದಳು. ಶಂಕರರು, "ಒಳಗೆ ಹೋಗಿ ನೋಡಮ್ಮ. ಏನಾದರೂ ಸಿಗಬಹುದು" ಎಂದರು. ಆಗ ಆಕೆ ಮನೆಯ ಹಿತ್ತಲಿಗೆ ಹೋಗಿ ನೋಡುತ್ತಾಳೆ. ಹಿತ್ತಲಿನ ನೆಲ್ಲಿಕಾಯಿ ಗಿಡದಲ್ಲಿ ಒಂದು ಕಾಯಿ ಬಿಟ್ಟಿತ್ತು. ಆಕೆ ಅದನ್ನೇ ತಂದು ಶಂಕರರಿಗೆ ಅರ್ಪಿಸಿದಳು. ಆಗ ಅವರು ಆ ಸಾಧ್ವಿಯ ಮೇಲೆ ಕರುಣೆ ತೋರಿ, ಅಲ್ಲಿಯೇ 'ಕನಕಧಾರಾ ಸ್ತೋತ್ರ' ವನ್ನು ರಚಿಸಿ, ಲಕ್ಷ್ಮಿಯನ್ನು ಸ್ತುತಿಸಿದರು. ಆಗ ಆ ಮನೆಯಲ್ಲಿ ಬಂಗಾರದ ನೆಲ್ಲಿಕಾಯಿಗಳ ಮಳೆಯೇ ಸುರಿಯಿತು ಎಂದು ಪ್ರತೀತಿ.

ಶಂಕರರ ಗುರುಕುಲವಾಸ ಎಂಟು ವರ್ಷ ಕಾಲ ನಡೆಯಿತು. ಶಂಕರರು ವೇದಾಂತದಲ್ಲಿ ಹೆಚ್ಚಿನ ಒಲವನ್ನು ಪಡೆದಿದ್ದರು. ಇದು ಎಲ್ಲಾ ಜ್ಞಾನಗಳ ಪರಿಸಮಾಪ್ತಿ. ಯಾವುದನ್ನು ತಿಳಿಯುವುದರಿಂದ ಎಲ್ಲವನ್ನೂ ತಿಳಿದಂತಾಗುತ್ತದೆಯೋ, ಅದೇ ವೇದಾಂತದ ಗುರಿ.

ಶಂಕರರ ಗುರುಕುಲವಾಸ ಮುಗಿಯಿತು. ಈಗ ಮನೆಯಲ್ಲಿಯೇ, ವಯಸ್ಸಾಗಿದ್ದ ತಾಯಿಯ ಸೇವೆ ಮತ್ತು ಪಾಠ ಪ್ರವಚನಗಳನ್ನು ಮಾಡುತ್ತಾ ಇದ್ದಾರೆ. ತಾಯಿಗೆ ದಿನವೂ ಪೂರ್ಣಾನದಿಯಲ್ಲಿಯೇ ಸ್ನಾನ ಮಾಡಿ ಅಭ್ಯಾಸ. ಆಗ ಬೇಸಿಗೆ ಕಾಲ. ನದಿ ಮನೆಯ ಹತ್ತಿರವೇ ಇದ್ದರೂ ಬಿಸಿಲಿಗೆ ನೀರು ಒಣಗಿಹೋಗಿದೆ. ಬಿಸಿಲಿನ ತಾಪದಲ್ಲಿಯೇ ಆರ್ಯಾಂಬೆಯು ಸ್ನಾನ ಮಾಡಿ ಮನೆಗೆ ಹಿಂದಿರುಗುತ್ತಿದ್ದಾಳೆ. ಮರಳು ಕಾದುಹೋಗಿದೆ. ಬಲಹೀನಳಾಗಿದ್ದ ಆಕೆ ಬಿಸಿಲಿನ ತಾಪಕ್ಕೆ ಬಳಲಿ ಅಲ್ಲಿಯೇ ಬಿದ್ದುಬಿಟ್ಟಳು. ಜ್ಞಾನ ತಪ್ಪಿತು. ವರ್ತಮಾನ ತಿಳಿದ ಶಂಕರರು ತಾಯಿಯನ್ನು ಉಪಚರಿಸಿ ಮನೆಗೆ ಕರೆತಂದರು. ಆದರೆ ಮತ್ತೆ ಮಾರನೇ ದಿನ, ತಾಯಿ ನದಿಯ ಸ್ನಾನಕ್ಕೆ ಹೊರಟಿದ್ದಾಳೆ. ಆಗ ಶಂಕರರು ಪೂರ್ಣಾನದಿಗೆ ನಮಸ್ಕರಿಸಿ, ತಾಯಿಗೆ ಅನುಕೂಲವಾಗುವಂತೆ, ಅದು ತನ್ನ ಪಾತ್ರವನ್ನು ವಿಸ್ತರಿಸಿಕೊಂಡು ಮನೆಯ ಬಾಗಿಲಿನಲ್ಲಿಯೇ ಹರಿಯಲಿ ಎಂದು ಪ್ರಾರ್ಥಿಸಿದರು. ಹಾಗೆ ಪ್ರಾರ್ಥಿಸಿದ ತಕ್ಷಣವೇ ಎಡೆಬಿಡದ ಮಳೆ ಸುರಿದು ಪೂರ್ಣಾನದಿ ಮನೆಯ ಬಾಗಿಲಿನವರೆಗೂ ಹರಿದುಬಂತು. ಆರ್ಯಾಂಬೆಯ ಜೊತೆಗೂಡಿ ಕಾಲಡಿಯ ಗ್ರಾಮಸ್ಥರೆಲ್ಲ ಆ ನದಿಯಲ್ಲಿ ಮಿಂದು ಶಂಕರರನ್ನು ಹರಸಿದರು.

ದಿನ ಕಳೆದಂತೆ ಶಂಕರರ ಕೀರ್ತಿಯೂ ಬೆಳೆಯತೊಡಗಿತು. ಕೇರಳದ ಮಹಾರಾಜನು ಈ ಬಾಲವಟುವಿನ ದರ್ಶನ ಪಡೆಯಲು ಆಶಿಸಿದನು. ತನ್ನ ಮಂತ್ರಿಯೊಬ್ಬನನ್ನು ಸೂಕ್ತ ಬಳುವಳಿಯೊಂದಿಗೆ ಕಳುಹಿಸಿದನು. ರಾಜನ ಆಣತಿಯಂತೆ ಮಂತ್ರಿಯು ಶಂಕರರ ಮನೆಯ ಬಾಗಿಲಿಗೆ ಬಂದನು. ಶಂಕರರನ್ನು ಗೌರವಿಸಿ, "ಕೇರಳದ ಮಹಾರಾಜರು ತಮ್ಮಲ್ಲಿಗೆ ನನ್ನನ್ನು ತಮ್ಮ ಪ್ರತಿನಿಧಿಯಾಗಿ ಕಳುಹಿಸಿದ್ದಾರೆ. ಅವರು ಪಂಡಿತೋತ್ತಮರು. ಅವರ ರಾಜಸಭೆಯಲ್ಲಿ ಬಹಳ ಮಂದಿ ವಿದ್ವಾಂಸರು ಆಶ್ರಯ ಪಡೆದಿದ್ದಾರೆ. ಅವರು ತಮ್ಮ ದರ್ಶನಕ್ಕಾಗಿ ಬಹಳ ಕಾತರರಾಗಿದ್ದಾರೆ. ತಾವು ಅವರ ಬಯಕೆಯನ್ನು ನೆರವೇರಿಸಿ ರಾಜಭವನವನ್ನು ತಮ್ಮ ಪಾದಧೂಳಿಯಿಂದ ಪವಿತ್ರಗೊಳಿಸಬೇಕು" ಎಂದು ವಿಜ್ಞಾಪಿಸಿಕೊಂಡನು. ಶಂಕರರು ವಿನಯದಿಂದ, "ನಾನು ಬ್ರಹ್ಮಚಾರಿ. ನನಗೆ ಯಾವ ಕೀರ್ತಿ ಅಥವಾ ಸ್ಥಾನದಲ್ಲಾಗಲಿ ಆಸಕ್ತಿ ಇಲ್ಲ. ಶಾಸ್ತ್ರಗಳಲ್ಲಿ ವಿಹಿತವಾಗಿರುವಂತೆ ಬ್ರಹ್ಮಚಾರಿಯು ಮಾಡಬೇಕಾದ ವೈದಿಕ ವಿಧಿಗಳನ್ನು ನೆರವೇರಿಸುತ್ತಿದ್ದೇನೆ. ತಾವೇ ಹೇಳಿದಂತೆ ತಮ್ಮ ಮಹಾರಾಜರು ಮಹಾವಿದ್ವಾಂಸರು ಎಂದ ಮೇಲೆ ಅವರಿಗೆ ಹೇಳಬೇಕಾದುದು ಏನೂ ಇಲ್ಲ. ಬ್ರಹ್ಮಚಾರಿಯಾದವನು ತನ್ನ ದಿನನಿತ್ಯದ ಕರ್ತವ್ಯದ ವಿಧಿಯನ್ನು ಬಿಡುವಂತಿಲ್ಲ. ಆದ್ದರಿಂದ ನಾನು ತಮ್ಮ ಇಚ್ಛೆಯಂತೆ ಅಲ್ಲಿಗೆ ಬರಲು ಸಾಧ್ಯವಿಲ್ಲ. ತಮ್ಮನ್ನು ಹೀಗೆ ಹಿಂದಕ್ಕೆ ಕಳುಹಿಸಬೇಕಾಗಿ ಬಂದುದಕ್ಕಾಗಿ ನನಗೂ ಸಹ ವ್ಯಸನವಾಗುತ್ತಿದೆ" ಎಂದರು. ಮಂತ್ರಿಯು ಈ ಸುದ್ದಿಯನ್ನು ತೆಗೆದುಕೊಂಡು ರಾಜಭವನಕ್ಕೆ ತೆರಳಿದನು. ಸ್ವತಃ ರಾಜನೇ ತನ್ನ ಪರಿವಾರದೊಂದಿಗೆ ಕಾಲಡಿಗೆ ದಯಮಾಡಿಸಿದನು; ಶಂಕರರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು; ತಾನು ತಂದಿದ್ದ ಹಣ್ಣು ಹೂವುಗಳನ್ನು ಭಕ್ತಿ ಗೌರವಗಳಿಂದ ಅವರಿಗೆ ಸಮರ್ಪಿಸಿದನು. ರಾಜನು ತಾನು ರಚಿಸಿದ್ದ ಗ್ರಂಥಗಳ ಹಸ್ತಪ್ರತಿಯನ್ನು ಶ್ರೀಶಂಕರರ ಬಳಿ ಸಮರ್ಪಿಸಿ, ಅವುಗಳ ಬಗೆಗೆ ಅವರ ಅಭಿಪ್ರಾಯವನ್ನು ತಿಳಿಯಬಯಸಿದನು. ಬಾಲ ಶಂಕರರು ಅದನ್ನು ಓದಿ ರಾಜನನ್ನು ಹೊಗಳಿದರು. ಹಾಗೆಯೇ ಅವನಿಗೆ ಬೇಕಾದ ವರವನ್ನು ಕೇಳಲು ಹೇಳಿದರು. ರಾಜನಿಗೆ ಸಂತಾನವಿರಲಿಲ್ಲವಾದ್ದರಿಂದ ಪುತ್ರಸಂತಾನವನ್ನು ಅಪೇಕ್ಷಿಸಿದನು. ಶ್ರೀಶಂಕರರು ಅದನ್ನು ಅನುಗ್ರಹಿಸಿದರು. ಆ ರಾಜನು ಶಂಕರರ ಭಕ್ತರಲ್ಲಿ ಒಬ್ಬನಾದನು.